# 8 CMRIT Students selected for Internship with Amazon

**Publication: Prajavani**
**Date: 05-11-2021**

## ಅಮೆಜಾನ್ ಇಂಟರ್ನ್‌ಶಿಪ್‌ಗೆ 8 ವಿದ್ಯಾರ್ಥಿಗಳು ಆಯ್ಕೆ

ಪ್ರಜಾವಾಣಿ ವಾರ್ತೆ

---

ಬೆಂಗಳೂರು: ನಗರದ ಸಿಎಂಆರ್‌ಐಟಿ ಕಾಲೇಜಿನ ಎಂಜಿನಿಯರ್ ವಿಭಾಗದ ಎಂಟು ವಿದ್ಯಾರ್ಥಿಗಳು ಅಮೆಜಾನ್ ಸಂಸ್ಥೆಯಲ್ಲಿ ಇಂಟರ್ನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ.

‘ಇಂಟರ್ನ್‌ಶಿಪ್‌ನ ಅವಧಿ ಆರು ತಿಂಗಳು. ಈ ಅವಧಿಯಲ್ಲೇ ವಿದ್ಯಾರ್ಥಿಗಳು ಶಿಷ್ಯವೇತನವಾಗಿ (ಸ್ಟೈಪೆಂಡ್) ₹80 ಸಾವಿರ ಪಡೆಯಲಿದ್ದಾರೆ’ ಎಂದು ಸಿಎಮ್‌ಆರ್‌ಐಟಿ ಕೆರಿಯರ್ ಗೈಡೆನ್ಸ್ ಮತ್ತು ಪ್ಲೇಸ್‌ಮೆಂಟ್ ಬ್ಯೂರೋದ ನಿರ್ದೇಶಕ ಲಕ್ಷ್ಮಣ್ ಮಲ್ಲಾ ತಿಳಿಸಿದರು.

‘ಕೋವಿಡ್‌ನಿಂದ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿತ್ತು. ಆದರೆ, ಸಂಸ್ಥೆಯ ವಿದ್ಯಾರ್ಥಿಗಳು ಅಮೆಜಾನ್ ಸಂಸ್ಥೆಯ ಮೂಲಕ ತಮ್ಮ ವೃತ್ತಿ ಜೀವನದ ಮೊದಲ ಹೆಜ್ಜೆ ಇಟ್ಟಿದ್ದಾರೆ. ಎಂಟರಲ್ಲಿ ಐದು ವಿದ್ಯಾರ್ಥಿಗಳು ಕಂಪ್ಯೂಟರ್ ಸೈನ್ಸ್ ವಿಭಾಗ ಹಾಗೂ ಮೂವರು ವಿದ್ಯಾರ್ಥಿಗಳು ಮಾಹಿತಿ ವಿಜ್ಞಾನ ವಿಭಾಗದವರು’ ಎಂದು ಹೇಳಿದರು.

‘ಅಮೆಜಾನ್ ಸಂಸ್ಥೆಯು ಇಂಟರ್ನ್‌ಶಿಪ್ ಯಶಸ್ವಿಯಾಗಿ ಪೂರ್ಣಗೊಳಿಸಿದವರಿಗೆ ಉದ್ಯೋಗವನ್ನೂ ನೀಡಲಿದ್ದು, ಇತರ ಸೌಲಭ್ಯಗಳ ಜೊತೆಗೆ ವಾರ್ಷಿಕ ₹25 ಲಕ್ಷಗಳವರೆಗೆ ವೇತನವನ್ನೂ ನೀಡಲಿದೆ’ ಎಂದು ಹೇಳಿದರು.

**Publication: Vishwavani**
**Date: 05-11-2021**

# 8 ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್

**ಬೆಂಗಳೂರು:** ಅಮೆಜಾನ್ ಕಂಪನಿ ಸಿಎಂಆರ್ ಐಟಿಯ 8 ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಇಂಟರ್ನ್‌ಶಿಪ್‌ಗೆ ಆಯ್ಕೆ ಮಾಡಲಾಗಿದೆ. ಆರು ತಿಂಗಳು ಅವಧಿಯ ಇಂಟರ್ನ್‌ಶಿಪ್ ಆಗಿದ್ದು, 80,000 ರೂ.ಗಳನ್ನು ಇಂಟರ್ನ್‌ಶಿಪ್ ಸ್ಟೈಫಂಡ್ ಆಗಿ ನೀಡುತ್ತಿದೆ ಎಂದು ಸಿಎಮ್‌ಆರ್‌ಐಟಿಯ ಕರಿಯರ್ ಗೈಡೆನ್ಸ್ ಮತ್ತು ಪ್ಲೇಸ್‌ಮೆಂಟ್ ಬ್ಯೂರೋದ ಉದ್ಯೋಗ ನಿರ್ದೇಶಕ ಲಕ್ಷ್ಮಣ್ ಮಲ್ಲಾ ತಿಳಿಸಿದ್ದಾರೆ.

ಕೊರೊನಾದಿಂದಾಗಿ ತಿಂಗಳ ಕಾಲ ವಿದ್ಯಾರ್ಥಿಗಳ ಭವಿಷ್ಯವಾದ ಕಾಲೇಜು ಕ್ಯಾಂಪಸ್‌ಗೂ ಅಡ್ಡಿಯುಂಟು ಮಾಡಿದೆ. ಆದರೆ ಇದು ಬೆಂಗಳೂರಿನ ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರತಿಭಾವಂತ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಇಂಟರ್ನ್‌ಶಿಪ್ ಮತ್ತು ಉದ್ಯೋಗಾವಕಾಶಗಳಿಗೆ ಇತ್ತೀಚೆಗೆ ದಾರಿಮಾಡಿಕೊಟ್ಟಿದೆ. ಅಮೆಜಾನ್ ಕಂಪನಿಯು ಆಯ್ಕೆ ಮಾಡಿದ 8 ವಿದ್ಯಾರ್ಥಿ ಗಳಲ್ಲಿ, 5 ವಿದ್ಯಾರ್ಥಿಗಳು ಕಂಪ್ಯೂಟರ್ ಸೈನ್ಸ್ ವಿಭಾಗದವರು, 3 ವಿದ್ಯಾರ್ಥಿಗಳು ಇನ್ಫಾರ್ಮೇಶನ್ ಸೈನ್ಸ್ ವಿಭಾಗದವರಾಗಿ ದ್ದಾರೆ. ಅಮೆಜಾನ್ ಕೇವಲ ಇಂಟರ್ನ್‌ಶಿಪ್ ನೀಡುವುದಕ್ಕಷ್ಟೇ ಸೀಮಿತವಾಗಿಲ್ಲ, ಇಂಟರ್ನ್‌ಶಿಪ್ ಅನ್ನು ಯಶಸ್ವಿಯಾಗಿ ಪೂರ್ಣ ಗೊಳಿಸಿದವರಿಗೆ ಅಮೆಜಾನ್‌ನಲ್ಲಿ ಪೂರ್ಣ ಸಮಯದ ಕೆಲಸ ವನ್ನೂ ನೀಡುತ್ತದೆ. ವಾರ್ಷಿಕ 25 ಲಕ್ಷ ರೂ.ಗಳ ವೇತನವನ್ನೂ ನೀಡಲಿದೆ ಎಂದು ಹೇಳಿದ್ದಾರೆ.

**Publication: Hosadigantha**
**Date: 05-11-2021**

ಹೊಸ ದಿಗಂತ 11
05 Nov 2021

# ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೆರವು

**ಬೆಂಗಳೂರು:** ಅಮೆಜಾನ್ ಕಂಪನಿಯು ಸಿಎಂಆರ್‌ಐಟಿಯುನ 8 ವಿದ್ಯಾರ್ಥಿಗಳನ್ನು ಆರು ತಿಂಗಳ ಅವಧಿಯ ಇಂಟರ್ನ್‌ಶಿಫ್‌ಗೆ ಆಯ್ಕೆ ಮಾಡಿಕೊಂಡಿದ್ದು, ಅವರಿಗೆ ಪ್ರೋತ್ಸಾಹ ಧನವಾಗಿ 80 ಸಾವಿರ ರೂ. ನೀಡಲಾಗುತ್ತದೆ. ಕೊರೋನಾ ಸಾಂಕ್ರಾಮಿಕ ರೋಗ ವಿದ್ಯಾರ್ಥಿಗಳ ಕ್ಯಾಂಪಸ್ ಜೀವನ ಕಿತ್ತುಕೊಂಡಿದೆ, ಆದರೆ ನಗರದ ಸಿಎಂಆರ್ ಸಂಸ್ಥೆ ಪ್ರತಿಭಾವಂತ ಇಂಜಿನಿಯರ್ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಫ್ ಹಾಗೂ ಉದ್ಯೋಗ ಅವಕಾಶಗಳನ್ನು ಕಳೆದುಕೊಂಡಿಲ್ಲ, ಅಮೆಜಾನ್ ಕೇವಲ ಉದ್ಯೋಗ ನೀಡುವುದಕ್ಕೆ ಮಾತ್ರ ಸೀಮಿತವಾಗಿಲ್ಲ, ಇಂಟರ್ನ್‌ಶಿಫ್ ಅವಧಿಯನ್ನು ಸಂಪೂರ್ಣವಾಗಿ ಪೂರೈಸಿದವರಿಗೆ ಉದ್ಯೋಗ ನೀಡುತ್ತದೆ ಎಂದು ಎಂದು ಸಿಎಂಆರ್‌ಐಟಿಯ ಉದ್ಯೋಗ ನಿರ್ದೇಶಕ ಲಕ್ಷ್ಮಣ್ ತಿಳಿಸಿದ್ದಾರೆ.

**Publication: Vartah Bharti**
**Date: 05-11-2021**

## ಅಮೆಝಾನ್ ಇಂಟರ್ನ್‌ಶಿಪ್‌ಗೆ ಎಂಟು ವಿದ್ಯಾರ್ಥಿಗಳು ಆಯ್ಕೆ

ಬೆಂಗಳೂರು, ನ.4: ನಗರದ ಸಿಎಂಆರ್-ಐಟಿ ಕಾಲೇಜಿನ ಇಂಜಿನಿಯರಿಂಗ್ ವಿಭಾಗದ ಎಂಟು ಮಂದಿ ವಿದ್ಯಾರ್ಥಿಗಳು ಅಮೆಝಾನ್ ಸಂಸ್ಥೆ ಇಂಟರ್ನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ.

ಇಂಟರ್ನ್‌ಶಿಪ್‌ಗೆ ಅವಧಿ ಆರು ತಿಂಗಳಾಗಿದ್ದು, ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ 80 ಸಾವಿರ ರೂ.ಶಿಷ್ಯ ವೇತನವನ್ನು ಸಂಸ್ಥೆ ನೀಡಲಿದೆ ಎಂದು ಸಿಎಂಆರ್‌ಐಟಿ ಕೆರಿಯರ್ ಗೈಡೆನ್ಸ್ ಮತ್ತು ಪ್ಲೇಸ್‌ಮೆಂಟ್ ಬ್ಯೂರೋ ನಿರ್ದೇಶಕ ಲಕ್ಷ್ಮಣ ಮಲ್ಲಾ ತಿಳಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕದಿಂದ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿತ್ತು. ಆದರೆ, ಸಿಎಂಆರ್ ವಿದ್ಯಾರ್ಥಿಗಳು ಅಮೆಝಾನ್ ಸಂಸ್ಥೆಯ ಮೂಲಕ ತಮ್ಮ ವೃತ್ತಿ ಜೀವನಕ್ಕೆ ಹೆಜ್ಜೆ ಇಟ್ಟಿದ್ದು, ಅಮೆಜಾನ್ ಸಂಸ್ಥೆಯು ಇಂಟರ್ನ್‌ಶಿಪ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗವನ್ನು ನೀಡಲಿದೆ ವಾರ್ಷಿಕ 25 ಲಕ್ಷ ರೂ.ವೇತನವನ್ನು ನೀಡಲಿದೆ ಎಂದು ಲಕ್ಷ್ಮಣ್ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

Bengaluru Edition
Nov 5, 2021 Page No.3

## Online Coverage

### 1. Mediatech

https://mediatech914.wordpress.com/2021/11/04/8-cmrit-students-get-to-intern-with-amazon/

### 2. Pelikken

https://pelikken.com/single/news/4541

### 3. City Today

[https://citytoday.media/2021/11/03/8-cmrit-students-get-to-intern-with-amazon/](https://citytoday.media/2021/11/03/8-cmrit-students-get-to-intern-with-amazon/)